Alleged Mismanagement in some Multi-purpose Co-operative Societies in Krishnarajanager Taluk.

*ಪ್ರಶ್ನೆ 123.—ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) 1950ನೆಯ ಇಸವಿ ಜನವರಿ 1ನೆಯ ತಾರೀಖಿನಲಾಗಾಯಿತು 1951ನೆಯ ಇಸವಿ ಜನವರಿ 1ನೆಯ ತಾರೀಖಿನವರೆಗೆ ಕೃಷ್ಣರಾಜನಗರ ತಾಲ್ಲೂಕಿನ ಸಮಗ್ರಸೇವಾ ಪರಸ್ಪರ ಸಹಾಯ ಸಂಘಗಳಿಗೆ ಸರ್ಕಾರದವರು ಸರಬರಾಯಿ ಮಾಡಿದ ಅಕ್ಕಿ ಮತ್ತು ಸಕ್ಕರೆ ಪರಿಮಾಣಗಳೆಷ್ಟು;

(b) ರಿಜಿಸ್ಟರಿನಲ್ಲಿ ಮತ್ತು ರೇಷನ್ ಕಾರ್ಡುಗಳಲ್ಲಿರುವ ಖತಾಯಿತಿಗಳ ಪ್ರಕಾರ ಸರಬರಾಯಿ ಮಾಡಿದ ಅಕ್ಕಿ ಮತ್ತು ಸಕ್ಕರೆ ಪರಿಮಾಣಗಳೆಷ್ಟು (ವ್ಯತ್ಯಾಸವನ್ನು ತೋರಿಸಬೇಕು);

(c) ಈ ಡಿಪೋಗಳಲ್ಲಿ ಸರಿಯಾದ ಆಡಳಿತ ಕ್ರಮವಿಲ್ಲವೆನ್ನುವ ಸಂಬಂಧದಲ್ಲಿ ಸರ್ಕಾರದವರಿಗೆ ಎಷ್ಟು ದೂರುಗಳು ಬಂದಿವೆ ಮತ್ತು ಅವುಗಳ ಮೇರೆ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮವೇನು?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

		ಪಲ್ಲಗಳು	ಸೇರುಗಳು
(a)	(i) ಅಕ್ಕಿ	5,161	55
	(ii) ಸಕ್ಕರೆ	1,130	ಚೀಲಗಳು

(b) ಮೇಲೆ ತಿಳಿಸಿರುವ ಹಾಗೆ ಇದೆ. 7 ಪಲ್ಲ ಮತ್ತು 7 ಸೇರುಗಳ ಅಕ್ಕಿಯ ವ್ಯತ್ಯಾಸವೂ ಮತ್ತು 4 ಮಣ ಸಕ್ಕರೆಯ ವ್ಯತ್ಯಾಸವೂ ಕಂಡುಬಂದಿದೆ.

(c) ಕನಬಾ ಸರ್ಕಲಿನ ಸಮಗ್ರಸೇವಾ ಪರಸ್ಪರ ಸಹಾಯ ಸಂಘದ ಮೇಲೆ, ಎಫಿಷಿಯರ್ಸಿ ಡೈರೆಕ್ಟರವರಿಗೆ ಒಂದು ದೂರು ಬಂದಿದ್ದಿತು. ಈ ವಿಷಯದಲ್ಲಿ ತಪಶೀಲು ಪರಿಶೀಲನೆ ನಡೆಯುತ್ತಿದೆ. ಮಾರಾಟದ ಡಿಪೋವಿನ ಗುಮಾಸ್ತರನ್ನು 'ಸಸ್ಪೆಂಡ್' ಮಾಡಲಾಗಿದೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಈ ಸಮಗ್ರಸೇವಾ ಪರಸ್ಪರ ಸಹಾಯ ಸಂಘದಲ್ಲಿ ಕೆಲಸ ಕಾರ್ಯಮಾಡತಕ್ಕವರ ಮೇಲೆ ದೂರುಬಂದಿತ್ತು ಎಂದು ಹೇಳಿರುತ್ತೀರಿ. ಅದು ಯಾವತರಹದ ದೂರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಟಾಕ್, ವಗೈರೆ ರೆಕ್ಕ ಪತ್ರಗಳಲ್ಲ ವ್ಯತ್ಯಾಸವಿದೆ ಎಂದು ದೂರು ಬಂದಿತ್ತು. ತಕ್ಷಣ ಚೆಕ್ ಮಾಡಲಾಗಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಆ ಸಂಘದಲ್ಲಿ ರೇಷನ್ ಕಾರ್ಡುಗಳ ಮೇಲೆ ಸುಳ್ಳು ಲೆಕ್ಕ ತೋರಿಸಿ ಅನೇಕವೇಳೆ ಸಕ್ಕರೆ, ಅಕ್ಕಿ issue ಆಗುತ್ತಾ ಇತ್ತು ಎಂಬುದು ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವ್ಯತ್ಯಾಸ ಇದ್ದದ್ದು 7 ಪಲ್ಲಾ 7 ಸೇರು. ಆದ್ದರಿಂದ ಅನೇಕವೇಳೆ ಎಂದು ಹೇಳುವುದು ಕಷ್ಟ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—1,130 ಚೀಲ ಸಕ್ಕರೆಯಲ್ಲಿ ಬಹುಭಾಗದ ಚೀಲಗಳು ಮೈಸೂರಿನಲ್ಲಿ ವಿರೇವಾರಿಯಾಗಿತ್ತು ಎಂಬುದಾಗಿ ದೂರು ಬಂದಿರುವುದು ನಿಜವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಬಂದಿಲ್ಲ. Mis-manage ಆಗಿದೆಯೆಂದು ದೂರು ಬಂದಿತ್ತು. ಎಫಿಷಿಯರ್ಸಿ ಆಡಿಟ್‌ನವರಿಂದ ಚೆಕ್ ಆಫ್ ಮಾಡಿಸಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—

The sales depot clerk is kept under suspension ಎಂದು ಹೇಳಿದ್ದೀರಿ. ಅದಕ್ಕೆ ಇದ್ದಂಥ ಮಹತ್ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರ ಕೊಟ್ಟಿದೆ. ಸ್ಟಾಕ್ ಎಚಾರದಲ್ಲಿ ದೂರು ಬಂತು. ಎಫಿಷಿಯರ್ಸಿ ಆಡಿಟ್‌ನವರು ಚೆಕ್ ಮಾಡಿದರು. ಅವರ ಶಿಫಾರಸಿನ ಮೇಲೆ .....

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಸ್‌ಪೆಂಡ್ ಮಾಡುವುದಕ್ಕೆ ಕಾರಣವೇನು ಎಂದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಡಿಮೆ ಬಂದಿದ್ದರಿಂದ, ಅದನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದೆಯೇ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ವಿರೇಚಾರಿಯೇ ಎಂಬುದು ಇತ್ಯರ್ಥವಾಗುವವರೆಗೂ ಅವನನ್ನು ಸಸ್‌ಪೆಂಡ್‌ನಲ್ಲಿಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—7 ಪಲ್ಲ 7 ಸೇರಿನಷ್ಟು ಮಾತ್ರ ವ್ಯತ್ಯಾಸ ಬಂದಿತ್ತೋ ಅಥವಾ ಇನ್ನೂ ಹೆಚ್ಚಾಗಿತ್ತೋ?

The Hon'ble Sri T. MARIAPPA.—The whole matter is under examination.

Mr. SPEAKER.—Next question. Sri M. C. Sivananda Sharma.

Claim by Government towards the destination shortages in each Rice Mill in Krishnarajanagar Taluk.

*ಪ್ರಶ್ನೆ 125.—ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಹೆಡ್‌ಕೋಟೆ ಫರ್ಕಾಟು ('ಕಂಟ್ರೋಲ್') ಜಾರಿಗೆ ಬಂದಾಗಿನಿಂದ, ಕೃಷ್ಣರಾಜನಗರ ತಾಲ್ಲೂಕಿನಲ್ಲಿರುವ ಬತ್ತ ಕುಟ್ಟುವ ಗಿರಣಿಗಳಿಂದ ಸರ್ಕಾರದವರ ಅಪ್ಪಣೆಮೇರೆಗೆ ಕಳುಹಿಸಿಕೊಡಲ್ಪಟ್ಟ ಧಾನ್ಯದ ಪರಿಮಾಣಗಳಲ್ಲಿ ಕೊರತೆ ಕಂಡುಬಂದ ಪರಿಮಾಣಗಳ ಸಂಬಂಧದಲ್ಲಿ ಒಟ್ಟು ಎಷ್ಟು ಮೊಬಲಗನ್ನು ನಷ್ಟ ಕಟ್ಟಿಕೊಡಬೇಕೆಂಬುದಾಗಿ ಸರ್ಕಾರದವರು ಹಕ್ಕು ಸಾಧಿಸಿದ್ದಾರೆ;

(b) ಕಳುಹಿಸಿಕೊಡಲ್ಪಟ್ಟ ಎಷ್ಟು ಪ್ರತ್ಯೇಕ ದಾಸ್ತಾನುಗಳಲ್ಲಿ ಕೊರತೆ ಕಂಡುಬಂದಿದ್ದಿತು; ಒಟ್ಟು ಕೊರತೆಬಿದ್ದ ಪರಿಮಾಣವೆಷ್ಟು;

(c) ಈ ದಾಸ್ತಾನುಗಳು ಬಂದು ಸೇರಬೇಕಾಗಿದ್ದ ಸ್ಥಳಕ್ಕೆ ಅವುಗಳನ್ನು ಕಳುಹಿಸಿಕೊಟ್ಟ ನಂತರ ಯಾವ ಸ್ಥಾನದಲ್ಲಿ ಕೊರತೆಯಿರುವುದು ತಿಳಿದುಬಂದಿತು; ಅವುಗಳನ್ನು ಕಳುಹಿಸಿಕೊಟ್ಟಮೇಲೆ ಎಷ್ಟು ಕಾಲಾವಧಿ ಕಳೆದಮೇಲೆ ಕೊರತೆ ಇದ್ದುದು ಕಂಡುಬಂದಿತು; ಬತ್ತದ ಗಿರಣಿಗಳ ವಾಲೀಕರುಗಳಿಗೆ ಈ ಕೊರತೆಗಳ ವಿಚಾರವನ್ನು ಯಾವಾಗ ತಿಳಿಯಪಡಿಸಲಾಯಿತು;

(d) ಅವುಗಳನ್ನು ಯಾರ ಯಾರ ವಿಚಾರಣೆಗೆ ಕಳುಹಿಸಿಕೊಡಲಾಗಿದ್ದಿತು; ಕಳುಹಿಸಿಕೊಟ್ಟವರು ಯಾರು ಯಾರು?

ಉತ್ತರ 125.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

(a) ಬತ್ತ ಕುಟ್ಟುವ ಗಿರಣಿಗಳು

			ನಷ್ಟ ಕಟ್ಟಿಕೊಡಬೇಕಾದ ಮೊಬಲಗು		
			ರೂ.	ಆ.	ಪೈ
1	ಎಸ್. ಬಿ. ಆರ್.	... ...	3,829	13	6
2	ಆರ್. ಕೆ. ಬಿ.	... ...	5,046	13	9
3	ಸಿ. ಎ. ಡಿ.	... ...	3,480	4	9
4	ಎಸ್. ಕೆ.	... ...	5,801	4	6
5	ಕರ್ನಾಟಕ	... ...	6,005	15	0
6	ಶ್ರೀನಿವಾಸ	... ...	3,322	6	3
7	ಶಾಂತಿನಾಥ	... ...	2,843	3	3
8	ಎಸ್. ಆರ್. ಆರ್.	... ...	4,664	0	11
9	ಎಸ್. ಜೆ. ಎಲ್.	... ...	2,387	6	0
10	ಎಸ್. ಕೆ. ಆರ್.	... ...	1,653	6	0
11	ಎಸ್. ಕೆ. ಪಿ.	... ...	3,397	0	0
12	ಎಸ್. ಪಿ. ಆರ್.	... ...	3,812	6	0
13	ಎಸ್. ಎಲ್. ಎಫ್.	....	92	8	0

(b)

ಜಂ. ನಂ.	ಮಿಲ್ಲುಗಳ ಹೆಸರುಗಳು.	ಕೊರತೆ ಕಂಡು ಬಂದ ದಾಸ್ತಾನುಗಳ ಸಂಖ್ಯೆ.	ಕೊರತೆಯ ಪರಿಮಾಣ: ಪಲ್ಲಾಗಳು.	ಸೇರುಗಳು.	ಎಷ್ಟು ಚೀಲಗಳಲ್ಲಿ ಕೊರತೆ ಕಂಡು ಬಂದಿತೆಂಬುದು.
1	ಎಸ್. ಬಿ. ಆರ್. ...	92	130	$6\frac{1}{4}$	120
2	ಆರ್. ಕೆ. ಬಿ. ...	104	175	$23\frac{1}{2}$	1,607
3	ಸಿ. ಎ. ಡಿ. ..	83	123	$74\frac{3}{4}$	86
4	ಎಸ್. ಕೆ. ...	130	289	79	173
5	ಕರ್ನಾಟಕ ...	89	156	54	1,793
6	ಶ್ರೀನಿವಾಸ ...	112	163	$51\frac{1}{2}$	505
7	ಶಾಂತಿನಾಥ ...	68	88	65	280
8	ಎಸ್. ಆರ್. ಆರ್. ...	104	145	14	497
9	ಎಸ್. ಜೆ. ಎಲ್. ...	47	63	$78\frac{1}{4}$	484
10	ಎಸ್. ಕೆ. ಆರ್. ...	40	51	$15\frac{3}{5}$	196
11	ಎಸ್. ಕೆ. ಪಿ. ...	60	129	$22\frac{1}{4}$	313
12	ಎಸ್. ಪಿ. ಆರ್. ...	62	85	66	648
13	ಎಸ್. ಎಲ್. ಎಫ್. ...	1	3	19	...
	ಒಟ್ಟು ...	892	1,585	$69\frac{1}{2}$	6,702

(c) 1. ಅವು ಯಾವ ಸ್ಥಳಗಳಿಗೆ ಬಂದು ತಲುಪಬೇಕಾಗಿದ್ದಿತೋ ಆ ಸ್ಥಳದಲ್ಲಿ.

2. ಅವುಗಳನ್ನು ಕಳುಹಿಸಿಕೊಟ್ಟಮೇಲೆ ಸಾಮಾನ್ಯವಾಗಿ ಯುಕ್ತವಾದಷ್ಟು ಕಾಲದೊಳಗಾಗಿಯೇ ಕೊರತೆಯಿದ್ದುದು ಕಂಡುಬಂದಿತು.

3. ಆ ಕೊರತೆಗಳಿದ್ದುದನ್ನು ಯಾವ ತಾಲ್ಲೂಕಿನಲ್ಲಿ ಕಾಣಲಾಯಿತೋ ಆ ತಾಲ್ಲೂಕಿನಿಂದ ಸಮಾಚಾರ ಬಂದಕೂಡಲೇ ಕೊರತೆಗಳಿದ್ದ ವಿಚಾರವನ್ನು ಮಾಲೀಕರುಗಳಿಗೆ ತಿಳಿಸಲಾಯಿತು.

(d) ಸರ್ಕಾರದವರಿಗಾಗಿ ಕಳುಹಿಸಿಕೊಡಲಾಗಿದ್ದಿತು.

ಸರ್ಕಾರದವರ ಪರವಾಗಿ ಮಿಲ್ ಮಾಲೀಕರು ಕಳುಹಿಸಿಕೊಳ್ಳುವರು.

ಶ್ರೀ ಎಂ. ಸಿ ಶಿವಾನಂದಶರ್ಮರವರು.—ಷಾರ್ಜೀಜ್ ಬಂದಿದೆ ಎಂಬ ವಿಷಯವನ್ನು ಮಿಲ್ ಮಾಲೀಕರಿಗೆ ವರ್ಷಗಟ್ಟಲೆ ಆದ ಮೇಲೆ ತಿಳಿಸಿರುವುದು ನಿಜವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲಿ ಸಮಾಚಾರ ಇರುವ ಪ್ರಕಾರ, ಆದಷ್ಟುಜಾಗ್ರತೆ ತಿಳಿಸಿದ್ದಾರೆ ಎಂದಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಮಿಲ್ ನಿಂದ ಹೋಗುವಾಗ ಎಷ್ಟು ಪಲ್ಲಾ ಇರಬೇಕಾಗಿತ್ತೋ ಅಷ್ಟು ಪಲ್ಲಾ ಇದ್ದು, ನಂತರ ಕಡಿಮೆಬಂದಿದ್ದಕ್ಕೆ ಕಾರಣವೇನು ಎಂಬುದನ್ನು ಗಮನಿಟ್ಟು ಪರಿಶೀಲಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೆ ಅಲ್ಲಿಂದ ಕಳುಹಿಸುವಾಗ ಸರಿಯಾಗಿ ಕಳುಹಿಸಿದ್ದಾರೆ ಎಂದು ಒಪ್ಪಿಕೊಳ್ಳುವುದು ಕಷ್ಟ. ಷಾರ್ಜೀಜ್ ಬಂದಿದೆ ಎಂದು ಸಮಾಚಾರ ತಾಲ್ಲೂಕಿನಿಂದ ಬಂದತಕ್ಷಣ ಅವರಿಗೆ ತಿಳಿಸಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—(ಬ) ಪ್ರಶ್ನೆಗೆ ಉತ್ತರವಾಗಿ 1,585 ಪಲ್ಲಾ ಷಾರ್ಜೀಜ್ ಬಂದಿದೆ ಎಂದು ಹೇಳಿದ್ದೀರಿ. ಅದಕ್ಕೆ

ಬಂದಿರುವುದು 46,327 ರೂಪಾಯಿ ಆಗಿದೆ. ಎಂದರೆ ನಮಾರು 20–25 ರೂಪಾಯಿ work out ಆಗುತ್ತದೆ. ತಾವು ಯಾವ ದರದಲ್ಲಿ ವಸೂಲಾತಿ ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Penal rates impose ಮಾಡಿದ್ದೇವೆ. ಆ ದರದಲ್ಲಿ ವಸೂಲು ಮಾಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Normal rate ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—19–20 ರೂಪಾಯಿ ಆಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಕ್ಕಿಗೆ ಯಾವ ದರದಲ್ಲಿ ನೀವು ಷಾರ್ಜೀಟ್ ಹಣ ವಸೂಲು ಮಾಡುತ್ತಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪೀನಲ್ ರೇಟ್ಸ್ ಇಂಪೋಸ್ ಮಾಡಿದ್ದೇವೆ. ಅದರಂತೆ ವಸೂಲು ಮಾಡುತ್ತೇವೆ. ಅದೆಷ್ಟು ಎಂಬುದನ್ನು ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಾರ್ಮಲ್ ರೇಟ್ ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾರ್ಮಲ್ ರೇಟ್ ಎಂದರೆ ಇಷ್ಟೂ ಪ್ರೈಸೇ; ಪರ್ಮೀಸ್ ಪ್ರೈಸೇ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ವಸೂಲು ಮಾಡುವ ದರ?

The Hon'ble Sri T. MARIAPPA.—I want notice to give the correct figure.

Sri H. M. CHANNABASAPPA.—I find that money has been taken at the rate of Rs. 20.

The Hon'ble Sri T. MARIAPPA.—Where?

Sri H. M. CHANNABASAPPA.—Please refer to item No. 5.

The Hon'ble Sri T. MARIAPPA.—Will the Hon'ble Member be definite, because there are series of items against clauses (*a*) and (*b*).

Sri H. M. CHANNABASAPPA.—Item 5: 'Karnataka Rice Mill.....: Rs. 6,005 collected.'

The Hon'ble Sri T. MARIAPPA.—I must look into the whole thing again. If there is a discrepancy here.....

Sri H. M. CHANNABASAPPA.—It is a question of fact which is borne out by the figures given.

The Hon'ble Sri T. MARIAPPA.—The facts are there and if there are any discrepancies, kindly bring them to my notice. I will have them investigated.

Sri H. M. CHANNABASAPPA.—Will the Hon'ble Minister kindly give the answer to-morrow?

The Hon'ble Sri T. MARIAPPA.—If the Hon'ble Member gives me the dedails for which he needs clarification, I will give the necessary information in the course of the session.

Sri H. M. CHANNABASAPPA.—Is it not laid down in the agreement between the Government and the Mill Owner that the Amildar is the consignor?

The Hon'ble Sri T. MARIAPPA.—No.

Sri H. M. CHANNABASAPPA.—Is it not laid down in the agreement executed between the Mill Owner and the Government that the Amildar at the spot from where the stocks are removed is the consignor?

The Hon'ble Sri T. MARIAPPA.—I do not admit that.

Sri H. M. CHANNABASAPPA.—May I know who will be in charge of paddy in the rice mills?

The Hon'ble Sri T. MARIAPPA.—There will be one Government servant to look after paddy stored there. The responsibility of the Mill Owner is none the less there.

Sri H. M. CHANNABASAPPA.—I do not question the responsibility. Will there be any Government officer in charge when the paddy is measured and despatched to the Railway Station?

The Hon'ble Sri T. MARIAPPA.—Yes.

Sri H. M. CHANNABASAPPA.—How is it justifiable to penalise the Mill Owner when there is the Government Officer?

The Hon'ble Sri T. MARIAPPA.—That question does not arise. I submit that this platform is not the place to settle the claims of the Mill Owner and the raiyat.

Sri H. M. CHANNABASAPPA.—I am only eliciting an answer. Is it open to the Hon'ble Minister to say that he is not prepared to answer?

Mr. SPEAKER.—He is not prepared to answer that question.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Within a reasonable time ಎಂದು ಉತ್ತರ ಹೇಳಿತ, ವರ್ಷಗಟ್ಟಲೆ ಆದಮೇಲೆ ಇಷ್ಟು ಅಕ್ಕಿ ಕಡಿಮೆಬಂದಿದೆ ಎಂದು ಹೇಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಸಂದರ್ಭಗಳಲ್ಲಿಯೂ ವರ್ಷಗಟ್ಟಲೆ ಆಗಿದೆಯೆಂದು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೆಲವು ಸಂದರ್ಭಗಳಲ್ಲಿ ಆರೀತಿ ಮಾಡಿದ್ದಾರೆಂದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Reasonable time ಎಂದರೆ ಏನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Reasonable time ಎಂದರ್ಥ.

Mr. SPEAKER.—Question hour is over.

SHORT NOTICE QUESTIONS AND ANSWERS.

Mr. SPEAKER (The Hon'ble Sri V. Venkatappa).—There is one short notice question No. 12 standing in the name of Sri T. Ramachar.

Death of Sri Nase Gowda in Kolar Taluk Police Lock-up.

ಪ್ರಶ್ನೆ 12.—ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಕುಪ್ಪಹಳ್ಳಿ ನಿವಾಸಿಯಾದ ಶ್ರೀ ನಾಸಗೌಡ ಎಂಬುವರು 29-3-51ನೆಯ ತಾರೀಖು ಕೋಲಾರ ತಾಲ್ಲೂಕು ಪೋಲೀಸು ಲಾಕಪ್ಪಿನಲ್ಲಿ ಅವರನ್ನು ರಿಮ್ಯಾಂಡ್ ಮಾಡಿದ 24 ಘಂಟೆಗಳೊಳಗಾಗಿ ವಿಧಿವಶರಾದುದು ನಿಜವೆ;

(b) ಅದು ನಿಜವಾಗಿದ್ದ ಪಕ್ಷದಲ್ಲಿ, ಅವರು ಆರೀತಿ ಸತ್ತುಹೋದ ಸಂದರ್ಭಕ್ಕೆ ಸಂಬಂಧಪಟ್ಟ ವಿವರಗಳೇನು?

ಉತ್ತರ.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರು).—

(a) ಹೌದು.

(b) ಅವರು ಆತ್ಮಹತ್ಯವನ್ನು ಮಾಡಿಕೊಂಡರೆಂಬುದಾಗಿ ವರದಿಯಾಗಿದೆ.

ಶ್ರೀ ಟಿ. ರಾಮಾಚಾರ್ಯರು.—ಯಾವರೀತಿಯ ಆತ್ಮಹತ್ಯ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನೋಟೀಸ್.

ಶ್ರೀ ಟಿ. ರಾಮಾಚಾರ್ಯರು.—ವಿಷ ತೆಗೆದುಕೊಂಡೆ ಅಥವ ನೇಣು ಹಾಕಿಕೊಂಡೆ, ಹೇಗೆ?

The Hon'ble Sri K. T. BHASHYAM.—I want notice. I have no idea as to the exact nature of the act. I must find out.

ಶ್ರೀ ಟಿ. ರಾಮಾಚಾರ್ಯರು.—ತನಿಖೆ ನಡೆದಿದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಡೆದಿದೆ. ಅವರು ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ.

ಶ್ರೀ ಟಿ. ರಾಮಾಚಾರ್ಯರು.—ಆ ವರದಿಯಲ್ಲಿ ಏನೂ ವಿವರ ಬಂದಿಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದೇ ರೀತಿ ಆಗಿದೆ ಎಂಬುದು ಗೊತ್ತಿಲ್ಲ.

ಶ್ರೀ ಟಿ. ರಾಮಾಚಾರ್ಯರು.—ಇದು ದುರ್ಮರಣ ವಾದ್ದರಿಂದ ಪೋಸ್ಟ್‌ಮಾರ್ಟಂ ಆಯಿತೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಪೋಸ್ಟ್ ಮಾರ್ಟಂ ಆಯಿತು, ತನಿಖೆ ಆಗಿದೆ. ಅದರ ಪ್ರಕಾರ there is no reason to suspect any foul play. The report is that he committed suicide.

ಶ್ರೀ ಟಿ. ರಾಮಾಚಾರ್ಯರು.—ಆ ವರದಿಯನ್ನು ನಮ್ಮ ಅವಗಾಹನೆಗೆ ತರುವುದಕ್ಕಾಗುತ್ತದೆಯೆ?

The Hon'ble Sri K. T. BHASHYAM.—I have no objection to make the papers available to the Hon'ble Member if he wants.

Death of Nase Gowda of Kuppahalli in Kasaba Police Station, Kolar.

Q.—13. Sri H. C. LINGA REDDY (Kolar District—General).—

Will the Government be pleased to state:—

(a) whether it is a fact that one Nase Gowda of Kuppahalli, Kolar Taluk, an undertrial prisoner, was found dead in the Kasaba Police Station, Kolar, on 29th March 1951 morning;

(b) under what circumstances he died;

(c) whether the circumstances are suspicious;

(d) whether they intend holding an impartial enquiry into the matter?

A.—The Hon'ble Sri K. T. BHASHYAM (Minister for Law and Labour).—

(a) Yes.

(b) It is reported that he committed suicide.

(c) and (d) The Second Magistrate, Kolar, has been directed to hold an enquiry.

Sri H. C. LINGA REDDY.—Did he not die under suspicious circumstances, tied to the window bar?

The Hon'ble Sri K. T. BHASHYAM.—The report is that he committed suicide. No foul play is suspected. This is the information I have got with me.

Sri H. C. LINGA REDDY.—Have the Government received information that the person was tied to the window bar in the lock-up?